ಓಎಸ್. 75/2019
ಪಿಡಬ್ಲ್ಯೂ-1

ದಿನಾಂಕ 14.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ-

44. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿವೆ.

ಓಎಸ್.ನಂ.24/2018 ರಲ್ಲಿನ ಆದೇಶ ಪುಟದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಒಎಸ್.24/2018 ರಲ್ಲಿನ ವಾದಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಒಎಸ್.24/2018 ರಲ್ಲಿನ ಲಿಖಿತ ಹೇಳಿಕೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ದಿನಾಂಕ 30.11.2017 ರಂದು ಶ್ರೀ ಹೆಚ್.ಎ.ಗಣೇಶ್ ರವರು ನೀಡಿರುವ ದೂರಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ದಿನಾಂಕ 30.11.2017 ರಂದು ಪ್ರತಿವಾದಿಯ ಕಾರ್ಯಕಾರಿ ಸಮಿತಿಯ ಸಭೆಯ ನಡಾವಳಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5, ದಿನಾಂಕ 19.12.2017 ರಂದು ವಾದಿಗೆ ಕಾರಣ ಕೇಳಿ ನೀಡಿರುವ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6, ದಿನಾಂಕ 25.12.2017 ರಂದು ವಾದಿ ಸದರಿ ನೋಟೀಸಿಗೆ ನೀಡಿರುವ ಉತ್ತರವನ್ನು ನಿಪಿ-7, ದಿನಾಂಕ 25.12.2017 ರಂದು ವಾದಿಯು ಪ್ರತಿವಾದಿಗೆ ನೀಡಿರುವ ದೂರಿನ ಪ್ರತಿಯನ್ನು ನಿಪಿ-8, ದಿನಾಂಕ 16.01.2018 ರಂದು ವಾದಿಯು ನೀಡಿರುವ ಜವಾಬನ್ನು ನಿಪಿ-9, ದಿನಾಂಕ 15.07.2018 ರಂದು ವಾದಿಗೆ ಕಾರಣ ಕೇಳಿ ನೀಡಿರುವ ನೋಟೀಸನ್ನು ನಿಪಿ-10, ದಿನಾಂಕ 18.01.2018 ರಂದು ವಾದಿಗೆ ಕಾರಣ ಕೇಳಿ ನೀಡಿರುವ ನೋಟೀಸನ್ನು ನಿಪಿ-11, ದಿನಾಂಕ 26.01.2018 ರಂದು ವಾದಿಯು ಸದರಿ ನೋಟೀಸುಗಳಿಗೆ ನೀಡಿದ ಉತ್ತರವನ್ನು ನಿಪಿ-12, ಕೂರ್ಗ್ ಸ್ಪೋರ್ಟ್ಸ್ ಕ್ಲಬ್ ನ ಬೈಲಾಸ್ ಗಳ ಪುಸ್ತಕವನ್ನು ನಿಪಿ-13, ದಿನಾಂಕ 31.01.2018 ರಂದು ಪ್ರತಿವಾದಿ ಕಾರ್ಯಕಾರಿ ಸಮಿತಿಯ ಸಭೆಯ ನಡಾವಳಿಯನ್ನು ನಿಪಿ-14 ಎಂದು ಗುರುತಿಸಲಾಯಿತು.

45. ದಿನಾಂಕ 01.02.2018 ರಂದು ವಾದಿಗೆ ಕಾರಣ ಕೇಳಿ ನೀಡಿರುವ ನೋಟೀಸನ್ನು ನಿಪಿ-15, ದಿನಾಂಕ 09.02.2018 ರಂದು ವಿಚಾರಣಾ ಸಮಿತಿಯ ಸಭೆಯ ನಡಾವಳಿಯನ್ನು ನಿಪಿ-16, ದಿನಾಕ 09.02.2018 ರಂದು ವಿಚಾರಣಾ

ಸಮಿತಿಯ ಮುಂದೆ ಹಾಜರಾಗುವಂತೆ ವಾದಿಗೆ ನೀಡಿರುವ ನೋಟೀಸನ್ನು ನಿಪಿ-17, ದಿನಾಂಕ 12.02.2018 ರಂದು ವಾದಿಯು ಪ್ರತಿವಾದಿಗೆ ನೀಡಿರುವ ನೋಟೀಸನ್ನು ನಿಪಿ-18, ದಿನಾಂಕ 12.02.2018 ರಂದು ವಾದಿಯು ಪ್ರತಿವಾದಿಗೆ ನೀಡಿರುವ ನೋಟೀಸನ್ನು ನಿಪಿ-19, ದಿನಾಂಕ 22.02.2018 ರಂದು ನೀಡಿರುವ ಅಂತಿಮ ವರದಿಯ ಪ್ರತಿಯನ್ನು ನಿಪಿ-20, ದಿನಾಂಕ 12.08.2016 ರಂದು ವಾದಿ, ವಾದಿಯ ಪತ್ನಿ ಮತ್ತು ಇತರರು ಪ್ರತಿವಾದಿಗೆ ನೀಡಿರುವ ದೂರನ್ನು ನಿಪಿ-21 ಎಂದು ಗುರುತಿಸಲಾಯಿತು.

46. ದಿನಾಂಕ 01.09.2019 ರಂದು ನೀಡಿರುವ ನೋಟೀಸು ಮತ್ತು ಅಂಚೆ ಲಕೋಟೆಯನ್ನು ನಿಪಿ-22 ಮತ್ತು 23, ಕೂರ್ಗ್ ಸ್ಪೋರ್ಟ್ಸ್ ಕ್ಲಬ್‌ನ ಏಜಿಎಂ ಪುಸ್ತಕವನ್ನು ನಿಪಿ-24 ಮತ್ತು ಆರ್.ಪಿ.ಎ.ಡಿ ಕವರನ್ನು ನಿಪಿ-25 ಎಂದು ಗುರುತಿಸಲಾಯಿತು. ದಿನಾಂಕ 01.09.2019 ರ ನೋಟೀಸು ಮತ್ತು ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯಲ್ಲಿ ಪ್ರತಿವಾದಿ ಸಂಸ್ಥೆಯ ಸೀಲು ಮತ್ತು ಸಹಿಗಳು ಇರುವುದಿಲ್ಲ ಎಂದು ಪ್ರತಿವಾದಿ ಪರ ವಕೀಲರು ತಕರಾರನ್ನು ಸಲ್ಲಿಸಿರುತ್ತಾರೆ , ಸದರಿ ತಕರಾರಿಗೆ ಒಳಪಟ್ಟು ನಿಪಿ-26 ಮತ್ತು 27 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-28 ಮತ್ತು 29, ದಿನಾಂಕ 16.09.2019 ರಂದು ವಾದಿಯು ಉಪ ನಿಬಂಧಕರು ಸಹಾಕರ ಸಂಘದ ಕಛೇರಿಗೆ ನೀಡಿರುವ ದೂರನ್ನು ನಿಪಿ-30 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಈ ಹಂತದಲ್ಲಿ ಪಾಟೀ ಸವಾಲಿಗೆ ವೇಳೆ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.

ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

(ಸಾಕ್ಷಿದಾರರ ಸಹಿ)